# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.

## ಸಿ.ಸಿ. ನಂ.**233/2021**

ಸಿಡಬ್ಲ್ಯೂಃ **5**
ಪಿಡಬ್ಲ್ಯೂಃ **8**

ದಿನಾಂಕಃ **12-12-2024**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | - | ರಾಜುಕುಮಾರ |
| ತಂದೆಯ ಹೆಸರು | - | ಕೀಶನ್ ರಾವ್ |
| ವಯಸ್ಸು | -? | **35** ವರ್ಷ |
| ಉದ್ಯೋಗ | - | ಕೆ.ಪಿ.ಟಿ.ಸಿ.ಎಲ್ ಕಚೇರಿಯಲ್ಲಿ ಗಣಕಯಂತ್ರ ನಿರ್ವಾಹಕ |
| ವಾಸಸ್ಥಳಃ | - | ಯಾದಗಿರಿ. |

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಚಾಸಾ-4 ರವರ ಪರಿಚಯ ನನಗೆ ಇರುತ್ತದೆ. ದಿನಾಂಕಃ 08.02.2021 ರಂದು ನಾನು ಹಾಗೂ ಚಾಸಾ-4 ರವರು ಮತ್ತು ಪೊಲೀಸರು ರೈಲು ನಿಲ್ದಾಣ ಯಾದಗಿರಿಯ ಅಪಘಾತ ಸ್ಥಳಕ್ಕೆ ಹೋಗಿದ್ದೇವು. ಅಲ್ಲಿ ಅಪಘಾತ ಆಗಿರುತ್ತದೆ ಎಂದು ನಮ್ಮಗೆ ಹೇಳಿದ್ದರು. ನಂತರ ಸದರಿ ಸ್ಥಳದಿಂದ ಮೃತದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ಪೊಲೀಸರು ನಮ್ಮಗೆ ಹೇಳಿದ್ದರು. ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 7 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 7(ಬಿ) ಎಂದು ಗುರುತಿಸಲಾಯಿತು. ನಾನು ನಿಪಿ 7 ರ ಮೇಲೆ ನಾನು ಸಹಿ ಮಾಡುವಾಗ ಮದಾಹ್ನ ಆಗಿತ್ತು. ಸಾಕ್ಷಿಯು 2 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಸದರಿ ಪೋಟೋಗಳನ್ನು ಈಗಾಗಲೇ ನಿಪಿ8 ಮತ್ತು 9 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಕರ ಸಾಕ್ಷ್ಯವನ್ನು ನುಡಿದ ಕಾರಣ ಹಿರಿಯ ಸ.ಸ. ರವರು ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅವರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಹಿರಿಯ ಸ.ಸ.ಅ ರವರಿಂದಃ

ದಿನಾಂಕಃ 08.02.2021 ರಂದು ಚಾಸಾ-**11** ರವರು ಅಪಘಾತ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದರು ಎಂದರೆ ಸಾಕ್ಷಿಯ ಇರಬಹುದು ಎಂದು ಹೇಳುತ್ತಾರೆ. ಮದ್ಯಾಹ್ನ **3** ಗಂಟೆಯಿಂದ **4** ಗಂಟೆಯ ವರೆಗೆ ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಅಪಘಾತ ಸ್ಥಳವು ರೈಲು ನಿಲ್ದಾಣದ ಕಾರು ನಿಲ್ಲುಗಡೆಯ ಸ್ಥಳದಲ್ಲಿ ಇರುತ್ತದೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ.ಹೆಚ್.ಎಂ.ಪಿ ರವರಿಂದಃ

ಯಾದಗಿರಿ ನಗರದಿಂದ ರೈಲು ನಿಲ್ದಾಣದ ಬಲಬದಿಯಲ್ಲಿ ವಾಹನಗಳ ನಿಲ್ಲುಗಡೆ ಸ್ಥಳದ ಇರುತ್ತದೆ ಎಂದರೆ ಸರಿ. ಅದೇ ರೀತಿ ರೈಲು ನಿಲ್ದಾಣದ ಎಡಬದಿಯಲ್ಲಿ ವಾಹನಗಳ ನಿಲ್ಲುವ ಸ್ಥಳ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ರೈಲು ನಿಲ್ದಾಣದ ಎಡಬದಿಗೆ ಬ್ಯಾರಿಕೇಡ್ ಹಾಕಿರುವ ಕಾರಣ ಸದರಿ ದಿಕ್ಕಿನ ಕಡೆಗೆ ವಾಹನ ನಿಲ್ಲಿಸಲು ಅನುವು ಮಾಡಿಕೊಡುವುದಿಲ್ಲ ಎಂದರೆ ಸರಿಯಲ್ಲ. ರೈಲು ನಿಲ್ದಾಣವನ್ನು ಪ್ರವೇಶಿಸಲು ಎರಡು ದ್ವಾರಗಳು ಇರುತ್ತವೆ ಎಂದರೆ ಸರಿ. ರೈಲು ನಿಲ್ದಾಣದ ಎಡಬದಿಯ ದ್ವಾರದಲ್ಲಿ ಟಿಕೇಟ್ ನ್ನು ಕೊಡುತ್ತಾರೆ ಎಂದರೆ ಸರಿ. ನಿಪಿ 8 ರಲ್ಲಿ ಅಪಘಾತ ಸ್ಥಳವು ಮುಖ್ಯ ದ್ವಾರದಿಂದ ಬಹಳ ದೂರದಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಅಪಘಾತ ಸ್ಥಳದಿಂದ ಮೃತದೇಹವನ್ನು ಸರಕಾರಿ ಆಸ್ಪತ್ರೆ ಯಾದಗಿರಿಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ಅಲ್ಲಿ ಯಾವುದೇ ವ್ಯಕ್ತಿ ಮೃತಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-8 ರವರು ನನ್ನ ಆತ್ಮೀಯರು ಆಗಿರುತ್ತಾರೆ ಎಂದರೆ ಸರಿ. ಚಾಸಾ-8 ರವರು ನನ್ನ ಜೊತೆಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಪೊಲೀಸರು ನಿಪಿ7 ರಂತೆ ಗುನ್ನಾ ಸ್ಥಳದ ಪಂಚನಾಮೆಯನ್ನು ಮಾಡಿ ನಿಪಿ 8 ಮತ್ತು 9 ನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-8 ರವರ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.